ಸಾಕ್ಷಿಯನ್ನು ದಿಃ 16.04.2022 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು 2 ರಿಂದ 4 ನೇ ಪ್ರತಿವಾದಿಗಳ ಪರ ಶ್ರೀ ಎಸ್ ಕೆ ಆರ್ ವಕೀಲರಿಂದಃ**

ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ತಯಾರಿಸಲು ಯಾರು ಮಾಹಿತಿ ಕೊಟ್ಟಿದ್ದಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ತಾನು ತನ್ನ ತಾಯಿ ಹಾಗೂ ಇತರೆ ವಾದಿಗಳು ಮಾಹಿತಿ ನೀಡಿದ್ದೇವೆ ಎಂದು ಉತ್ತರಿಸುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ತಯಾರಿಸಲು ನನಗೆ ಸ್ವಂತ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ. ಪಾಲು ವಿಭಾಗ ಕೋರಿ ಈ ದಾವೆಯನ್ನು ಹೂಡಿದ್ದೇವೆ. ನಾನು ಇಂಜಿನಿಯರ್ ಆಗಿ ಕಳೆದ 14 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನಾನು ಕಳೆದ 14 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಾಗಿದ್ದೇನೆ ಎಂದರೆ ಸರಿ.

1 ನೇ ವಾದಿ ನನ್ನ ಅಕ್ಕ. 3 ನೇ ವಾದಿ ನನ್ನ ತಂಗಿ. 4 ನೇ ವಾದಿ ನನ್ನ ತಾಯಿ. 1 ನೇ ವಾದಿ ಮದುಗಿರಿಯಲ್ಲಿ ವಾಸವಾಗಿದ್ದಾಳೆ. 1 ನೇ ವಾದಿಯ ಗಂಡ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾಗಿ ಕೆಲಸ ಮಾಡುತ್ತಿದ್ದಾರೆ. ಅವರು ಮಧುಗಿರಿಯಲ್ಲಿ ಕಳೆದ 1 **½** ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ. 4 ನೇ ವಾದಿ 05.01.2020 ರಂದು ಮೃತ ಪಟ್ಟಿದ್ದಾರೆ.

ಈಗ 1 ನೇ ಪ್ರತಿವಾದಿ ಬೆಂಗಳೂರಿನಲ್ಲಿ ವಾಸವಾಗಿದ್ದಾನೆ . 2 ಮತ್ತು 3 ನೇ ಪ್ರತಿವಾದಿಗಳು ಹೆಚ್ ದಯಾನಂದ್ ರವರ 2 ನೇ ಹೆಂಡತಿ ಧ್ರಾಕ್ಷಾಯಿಣಿಯವರ ಮೂಲಕ ಹುಟ್ಟಿದ ಮಕ್ಕಳು ಎಂದರೆ ಸರಿ. ಸಾಕ್ಷಿ ಮುಂದುವರೆದು ಧ್ರಾಕ್ಷಾಯಿಣಿ ಕಾನೂನು ಬದ್ದ ಹೆಂಡತಿಅಲ್ಲ ಎಂದು ಉತ್ತರಿಸುತ್ತಾರೆ. 4 ನೇ ಪ್ರತಿವಾದಿ ಹೆಚ್. ದಯಾನಂದ್ ರವರ

ಜೀವಿತಾವಧಿಯಲ್ಲಿ ಅವರನು ಕಾನೂನು ಬದ್ದವಾಗಿ ಮದುವೆಯಾದ ಹೆಂಡತಿ ಎಂದರೆ ಸರಿಯಲ್ಲ. ಹೆಚ್ ದಯಾನಂದ್ ರವರು 4 ನೇ ಪ್ರತಿವಾದಿಯನ್ನು ಮದುವೆಯಾದ ವಿಚಾರ ಹಾಗೂ ಅವರ ಮೂಲಕ 2 ಮತ್ತು 3 ನೇ ಪ್ರತಿವಾದಿಗಳು ಜನಿಸಿದ ವಿಚಾರ ನಮಗೆ ಮೊದಲಿನಿಂದಲೂ ಗೊತ್ತಿದೆ ಎಂದರೆ ಸರಿಯಲ್ಲ.

ನನ್ನ ತಾತನ ಹೆಸರು ಸಣ್ಣ ಹಟ್ಟೆಪ್ಪ. ನನ್ನ ತಾತ ಯಾವಾಗ ಮೃತ ಪಟ್ಟಿದ್ದಾರೆ ಎನ್ನುವುದು ನನಗೆ ಮರೆತುಹೋಗಿದೆ. ಸಣ್ಣ ಹಟ್ಟೆಪ್ಪನ ಹೆಂಡತಿ ಯಲ್ಲಮ್ಮ 2012 ರಲ್ಲಿ ಮೃತಪಟ್ಟಿದ್ದಾಳೆ. ಸಣ್ಣ ಹಟ್ಟೆಪ್ಪ ಹಾಗೂ ಯಲ್ಲಮ್ಮನಿಗೆ ಜಯರಾಮ್, ದಯಾನಂದ್ ಹಾಗೂ ಮಂಜುನಾಥ್ ಎನ್ನುವ ಮೂವರು ಮಕ್ಕಳು ಇದ್ದರು. ಸಣ್ಣ ಹಟ್ಟೆಪ್ಪ ಹಾಗೂ ಯಲ್ಲಮ್ಮನಿಗೆ ಹೆಣ್ಣು ಮಕ್ಕಳು ಇದ್ದರೋ ಇಲ್ಲವೋ ಎನ್ನುವುದು ನನಗೆ ಗೊತ್ತಿಲ್ಲ. ಹೆಚ್. ದಯಾನಂದ್ 25.10.2010 ರಂದು ಮೃತ ಪಟ್ಟಿದ್ದಾರೆ. ಹೆಚ್ . ಮಂಜುನಾಥ್ ಬದುಕಿದ್ದಾರೆ.

ಸಣ್ಣ ಹಟ್ಟೆಪ್ಪನಿಗೆ ದಾವಾಸ್ತಿಗಳು ಅವರ ತಂದೆಯ ಮೂಲಕ ಬಂದಿವೆ. ನನಗೆ ದಾವಾಸ್ತಿಗಳ ಬಗ್ಗೆ ಮಾಹಿತಿ ಇದೆ. ಅವು ಸರ್ವೆ ನಂ.26/3 ರಲ್ಲಿನ 30 ಗುಂಟೆ, ಸರ್ವೆ ನಂ.27/3 ರಲ್ಲಿನ 29 ಗುಂಟೆ, ಸರ್ವೆ ನಂ.42 ರಲ್ಲಿನ 2.11 ಎಕರೆ, ಸರ್ವೆ ನಂ.279 ರಲ್ಲಿನ 4.23 ಎಕರೆ, ಸರ್ವೆ ನಂ.285 ರಲ್ಲಿನ 17 ಎಕರೆ, ಸರ್ವೆ ನಂ.22/2 ರಲ್ಲಿ 2.21 ಎಕರೆ, ಸರ್ವೆ ನಂ.106/25, ಸರ್ವೆ ನಂ.106/26 ಹಾಗೂ ಸರ್ವೆ ನಂ.28/3 ರ ಸ್ವತ್ತುಗಳು.

ಸರ್ವೆ ನಂ.26/3 ರ ಚೆಕ್ಕುಬಂದಿಯನ್ನು ನನಗೆ ಹೇಳಲು ಆಗುವುದಿಲ್ಲ. ಸಾಕ್ಷಿಗೆ ನಿಪಿ.1 ರಿಂದ 11 ರ ದಾಖಲೆಗಳನ್ನು ತೋರಿಸಿ ಅವುಗಳನ್ನು ನ್ಯಾಯಾಲಯಕ್ಕೆ ಯಾರು

ಹಾಜರು ಪಡಿಸಿದ್ದು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ತನ್ನ ತಾಯಿ ಹಾಜರು ಪಡಿಸಿದ್ದಾರೆಂದು ಉತ್ತರಿಸುತ್ತಾರೆ. ಸಾಕ್ಷಿಗೆ ನಿಪಿ-1 ರಿಂದ 6ರ ದಾಖಲೆಗಳನ್ನು ತೋರಿಸಿ ಅವು ಯಾವ ದಾಖಲೆಗಳು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಅವುಗಳನ್ನು ತನ್ನ ತಾಯಿ ಹಾಜರು ಪಡಿಸಿದ್ದಾರೆ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ನಿಪಿ-7 ರ ದಾಖಲೆಯನ್ನು ತೋರಿಸಿ ಅದು ಯಾವ ದಾಖಲೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಆ ದಾಖಲೆಯನ್ನು ನೋಡಿ ಅದು ಪಾಲುವಿಭಾಗ ಪತ್ರ ಎಂದು ಉತ್ತರಿಸುತ್ತಾರೆ ನಿಪಿ-7 ರ ಪಾಲು ವಿಭಾಗ ಪತ್ರ ಜಯರಾಂ, ದಯಾನಂದ್ ಹಾಗೂ ಮಂಜುನಾಥ್ ರವರ ನಡುವೆ ಆಗಿದೆ. ಆ ದಾಖಲೆ 13.02.1976 ರಲ್ಲಿ ಆಗಿದೆ.

ನಿಪಿ.7 ರ ಪಾಲು ವಿಭಾಗದ ಪ್ರಕಾರ ನಿಮ್ಮ ತಂದೆ ದಯಾನಂದ್ ರವರಿಗೆ ಯಾವ ಸ್ವತ್ತುಗಳು ಬಂದಿವೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಿವೇಶನ ಸಂಖ್ಯೆ122, ಹರ್ತಿಕೋಟೆಯಲ್ಲಿರುವ ಮನೆ, ಸರ್ವೆ ನಂ.279 ರಲ್ಲಿನ 4.23 ಎಕರೆ, ಸರ್ವೆ ನಂ,285 ರಲ್ಲಿನ 17 ಎಕರೆ ಹಾಗೂ ಸರ್ವೆ ನಂ.26/2 ರಲ್ಲಿನ 2.21 ಎರಕೆ ಜಮೀನು ನನ್ನ ತಂದೆ ಹಾಗೂ ಹೆಚ್ ಜಯರಾಂರವರ ಜಂಟಿ ಪಾಲಿಗೆ ಬಂದಿತ್ತು ಎಂದು ಉತ್ತರಿಸುತ್ತಾರೆ. ಈಗ ಹೇಳಿದ ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ.

ದಾವಾ "ಎ" ದಿಂದ "ಡಿ" ಸ್ವತ್ತುಗಳು ನಮ್ಮ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿ. ದಾವಾ "ಇ" ಮತ್ತು "ಎಫ್" ಸ್ವತ್ತುಗಳನ್ನು ನನ್ನ ತಂದೆ ಅವರ ಜೀವಿತಾವಧಿಯಲ್ಲಿ ಖರೀದಿಸಿದ್ದಾರೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ 2 ರಿಂದ 4 ನೇ ಪ್ರತಿವಾದಿಗಳ ಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು).

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.